1832(2431)

ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಪ್ರಧಾನ ಮಂತ್ರಿಗಳ ಸಡಕ್ ಯೋಜನೆಯಡಿ ರಾಜ್ಯದಲ್ಲಿ ಗ್ರಾಮೀಣ ಸಂಪರ್ಕ ರಸ್ತೆ ಕಾರ್ಯಕ್ರಮ ಯೋಜನೆ ಸಿದ್ಧಪಡಿಸಲಾಗಿದೆಯೆ;

2. ಹಾಗಿದ್ದಲ್ಲಿ ತುರುವೇಕೆರೆ ತಾಲ್ಲೂಕಿಗೆ ಎಷ್ಟು ಕಟ್ಟ ಸಿದ್ಧ ಮಾಡಲಾಗಿದೆ.

3. ಎಂದಿನಿಂದ ರಸ್ತೆ ಕೆಲಸ ಪ್ರಾರಂಭವಾಗಲಿದೆ; ಪೂರ್ಣಗೊಳ್ಳುವುದೆಂದು ಟೆಂಡರ್ ಕರೆದ ದಿನಾಂಕ ತಿಳಿಸುವುದು?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

1. 2000-2001ನೇ ಸಾಲಿನ ಯೋಜನೆ ಸಿದ್ಧಪಡಿಸಲಾಗಿದೆ. ಮತ್ತು ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತಿರುತ್ತದೆ.

2. ತುರುವೇಕೆರೆ ತಾಲ್ಲೂಕಿನಲ್ಲಿ ಕೆಟಿ ರಸ್ತೆಯಿಂದ ಅನೆಕೆರೆವರೆಗೆ, ತೋರೆಮಾರನಹಳ್ಳಿ - ಭೂವನಹಳ್ಳಿ ಮಾರ್ಗವಾಗಿ ಹೋಗುವ ರಸ್ತೆಯ ಅಭಿವೃದ್ಧಿ ಕಾಮಗಾರಿ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆಯಾಗಿದ್ದು ಅಂದಾಜು ವೆಚ್ಚ ರೂ.21.39 ಲಕ್ಷ ಆಗಿರುತ್ತದೆ.

3. ಸದರಿ ಕಾಮಗಾರಿಯನ್ನು ಗುತ್ತಿಗೆ ಆಧಾರದ ಮೇಲೆ 15ನೇ ಆಗಸ್ಟ್ 2001ರ ವೇಳೆಗೆ ಪ್ರಾರಂಭಿಸಲಾಗುವುದು. ಪ್ರಾರಂಭಗೊಂಡ 9 ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು. ಟೆಂಡರ್ ಪ್ರಕಟಣೆಯನ್ನು ದಿನಾಂಕ: 23-3-2001ರಂದು ಪ್ರಕಟಿಸಲಾಗಿದೆ.

ಪ್ರಧಾನ ಮಂತ್ರಿಗಳ 100 ಲಕ್ಷ ಯೋಜನೆಯಡಿಯಲ್ಲಿ ಕೈಗೊಳ್ಳಲಿರುವ ಕಾಮಗಾರಿಗಳು.

1833(2432)

ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಪ್ರಧಾನ ಮಂತ್ರಿಗಳ (100) ಲಕ್ಷ ಯೋಜನೆಯಡಿ 2001-02ನೇ ಸಾಲಿಗೆ ಕಾಮಗಾರಿಗಳ(ರಸ್ತೆ) ಪಟ್ಟಿ ಮಾಡಲು ಇರುವ ತೊಂದರೆಯೇನು?

2. ಅಧಿಕಾರಿಗಳು ಇದುವರೆಗೂ ರಸ್ತೆಗಳ ಪಟ್ಟಿ ಮಾಡಲು ಹಿಂದೇಟು ಹಾಕಲು ಕಾರಣವೇನು?

3. ಯಾವಾಗ ಪಟ್ಟಿ ಮಾಡಲಾಗುವುದು; ಎಂದಿನಿಂದ ಕೆಲಸ ಪ್ರಾರಂಭ ಮಾಡಲಾಗುವುದು? (ವಿವರ ನೀಡುವುದು)

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

1. ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಕಾಮಗಾರಿಗಳನ್ನು ಪಟ್ಟಿ ಮಾಡುವ ಬಗ್ಗೆ ಕೇಂದ್ರ ಸರ್ಕಾರದಿಂದ ಇತ್ತೀಚೆಗೆ ದಿನಾಂಕ:16-6-2001ರಲ್ಲಿ ಮಾರ್ಗ ಸೂಚಿಗಳು ಬಂದಿದ್ದು, ಆ ಪ್ರಕಾರ ಕಾಮಗಾರಿಗಳ ಪಟ್ಟಿ ತಯಾರಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರಿಗೆ 27-6-2001ರಂದು ಸೂಚನೆ ನೀಡಲಾಗಿದೆ.

2. ಮಾರ್ಗ ಸೂಚಿಗಳು ಇತ್ತೀಚೆಗೆ ಬಂದ ಕಾರಣ ಪಟ್ಟಿ ತಯಾರಿಸಲು ವಿಳಂಬವಾಗಿದೆ.

3. ಜುಲೈ 31ರೊಳಗೆ ಪಟ್ಟಿ ತಯಾರಿಸಲು ಕ್ರಮ ಕೈಗೊಳ್ಳಲಾಗುವುದು. ಅನಂತರ ಕಾಮಗಾರಿಗಳು ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆದ ನಂತರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಬೀರೂರು ಕ್ಷೇತ್ರದಲ್ಲಿನ ಜಿಲ್ಲಾ ಪಂಚಾಯತಿ ಸಹಾಯಕ ಅಭಿಯಂತರರ ಕಛೇರಿ ತೆಗೆಯುವುದು.

1836(2050)

ಶ್ರೀ ಕೆ.ಬಿ.ಮಲ್ಲಿಕಾರ್ಜುನ (ಬೀರೂರು): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು